# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 18-10-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಳೆಯಿಂದ ಕರ್ನಾಟಕದಲ್ಲಿ ಜೋಳ ಬೆಳೆ ವ್ಯಾಪಾರ ಹಾನಿ

ಬೆಳೆಯ ಕೊನೆಯ ಅವಧಿಯ ಹೆಚ್ಚುವರಿ ಮಳೆಯಿಂದ ಕರ್ನಾಟಕದಲ್ಲಿ ಜೋಳ ಬೆಳೆಗೆ ವ್ಯಾಪಕ ಹಾನಿ ಸಂಭವಿಸಿದೆಯೆನ್ನಲಾಗಿದ್ದು ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಹೊಸ ಬೆಳೆಯ ಕಟಾವಿನ ಜೋಳದಲ್ಲಿ ಅಧಿಕ ತೇವಾಂಶವಿದ್ದು ಈಗ ದರ ಕಡಿಮೆಯಿದೆ. ಮುಂದೆ ಮಾರುಕಟ್ಟೆಯಲ್ಲಿ ಲಭ್ಯತೆ ಕಡಿಮೆಯಾಗುವ ಸಾಧ್ಯತೆಯಿದ್ದು ದರ ಹೆಚ್ಚಳವಾಗುವ ಸಾಧ್ಯತೆಗಳಿವೆ. ರಾಜಸ್ಥಾನದಲ್ಲೂ ಬೆಳೆ ಹಾನಿಯಾಗಿದೆಯೆನ್ನಲಾಗಿದೆ.

## ಕೊಲ್ಹಾಪುರದಲ್ಲಿ ಅಧಿಕ ಮಳೆಯಿಂದ ಸೋಯಾಬೀನ್ ಬೆಳೆ ಹಾನಿ

ಕೊಲ್ಹಾಪುರದಲ್ಲಿ ಅಧಿಕ ಮಳೆಯಿಂದ ಸೋಯಾಬೀನ್ ಬೆಳೆಗೆ ಗಣನೀಯ ಹಾನಿ ಸಂಭವಿಸಿದೆಯೆನ್ನಲಾಗಿದೆ. 670 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆಯೆನ್ನಲಾಗಿದೆ. ಉತ್ಪಾದಿತ ಸೋಯಾಬೀನ್ ಗುಣಮಟ್ಟ ಇಳಿಕೆಯಾಗುವ ಸಂಭವವಿದೆಯೆನ್ನಲಾಗಿದೆ. ರಾಜಸ್ಥಾನದಲ್ಲೂ ಬೆಳೆ ಹಾನಿಯಾಗಿದೆಯೆನ್ನಲಾಗಿದೆ. 18 ರಿಂದ 20 ಶೇಕಡಾ ಹಾನಿ ಸಂಭವಿಸಿದೆಯೆನ್ನಲಾಗಿದ್ದು, 150000 ಟನ್‌ಗಳ ಹಾನಿಯಾಗಿದೆಯೆನ್ನಲಾಗಿದೆ. ಹಾನಿಗೊಂಡಾಗ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗಲಿದೆಯೆನ್ನಲಾಗಿದೆ. ಈಗ ದರ ಇಳಿಕೆಯಾಗಿದ್ದು ಮುಂದಿನ ದಿನಗಳಲ್ಲಿ ಸ್ವಲ್ಪಮಟ್ಟಿನ ಚೇತರಿಕೆ ಕಾಣುವ ಸಾಧ್ಯತೆಯಿದೆ.

## ಕಾಫಿ ಬೀನ್ ದರ ಇಳಿಕೆ

ಡಾಲರ್‌ನ ಪ್ರಾಬಲ್ಯ ಹಾಗೂ ಪ್ರಧಾನ ಉತ್ಪಾದಕ ದೇಶಗಳಲ್ಲಿ ಬೆಳೆಗೆ ಪೂರಕ ವಾತಾವರಣದಿಂದ ಮುಂದಿನ ಬೆಳೆಯ ಉತ್ಪಾದನೆ ಹೆಚ್ಚಳದ ನಿರೀಕ್ಷೆಯಿಂದ ಅರೆಬಿಕಾ ಕಾಫಿ ಬೀನ್ ದರಗಳು ಇಳಿಕೆ ಕಂಡಿವೆ. ICE ಪ್ರಮಾಣಕ್ಕೆ ಅರೆಬಿಕಾ ಕಾಫಿ ದಾಸ್ತಾನು 23 ವರ್ಷಗಳ ಕನಿಷ್ಠ ಮಟ್ಟಕ್ಕಿಳಿದಿದ್ದು ಅಕ್ಟೋಬರ್ 13 ರಂದು 408419 ಚೀಲಗಳಾಗಿತ್ತೆನ್ನಲಾಗಿದೆ. ರಾಬೆಸ್ಟಾ ಕಾಫಿ ಬೀನ್ ಕೂಡಾ ದರ ಇಳಿಕೆ ಕಂಡಿದೆ. ದರಗಳು ಮತ್ತೆ ಹೆಚ್ಚಳವಾಗುವ ಸಾಧ್ಯತೆಗಳಿವೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 7 ವಾರಗಳ ಗರಿಷ್ಠ ಮಟ್ಟಕ್ಕೆ

ಡಾಲರ್‌ಗೆದುರು ದುರ್ಬಲ ರಿಂಗಿಟ್ಸ್ ಹಾಗೂ ಜಾಗತಿಕ ಖಾದ್ಯತೈಲ ಪೂರೈಕೆಯ ಕಳವಳದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ 7 ವಾರಗಳಲ್ಲೇ ಗರಿಷ್ಠ ಮಟ್ಟ ತಲುಪಿದೆ. 4.70 ಶೇಕಡಾ (183 ರಿಂಗಿಟ್ಸ್) ಹೆಚ್ಚಳಗೊಂಡು 4070 ರಿಂಗಿಟ್ಸ್ $ 863.94 ಕ್ಕೆ ಹೆಚ್ಚಳವಾಗಿದೆ. ಡಾಲರ್ ರೂಪದಲ್ಲಿ ಖರೀದಿಸುವವರಿಗೆ ಲಾಭವಾಗಿದೆ. ಅಕ್ಟೋಬರ್ 1 ರಿಂದ 15 ರ ಅವಧಿಯಲ್ಲಿ ಮಲೇಶ್ಯಾದ ಪಾಮೆಣ್ಣೆ ರಫ್ತು ಹಿಂದಿನ ತಿಂಗಳ ಈ ಅವಧಿಗಿಂತ 0.9 ಶೇಕಡಾ ಹಿನ್ನಡೆ ಕಂಡು 640,119 ಟನ್‌ಗಳಾಗಿವೆಯೆಂದು SGSವರದಿ ಮಾಡಿದೆ.

## ಆಮದಿತ ಗೋಧಿಯಿಂದ ಉತ್ಪಾದಿತ ಗೋಧಿ ಹುಡಿ ರಫ್ತಿಗೆ ಅವಕಾಶ

ಆಮದಿತ ಗೋಧಿಯಿಂದ ಉತ್ಪಾದಿತ ಗೋಧಿ ಹುಡಿ ರಫ್ತಿಗೆ ಸರಕಾರ ಅನುಮತಿಸಿದೆ. ಹಾಗೂ ಈ ಉದ್ದೇಶಕ್ಕಾಗಿ ಕರರಹಿತ ಗೋಧಿ ಆಮದು ಸೌಲಭ್ಯ ಕಲ್ಪಿಸಿದೆ. ದರ ನಿಯಂತ್ರಿಸುವ ಸಂದರ್ಭ ಬಂದಲ್ಲಿ ಅವಶ್ಯ ವಿದ್ದರೆ ಸರಕಾರದ ದಾಸ್ತಾನಿನಿಂದ ಮುಕ್ತ ಮಾರುಕಟ್ಟೆಗೆ ಗೋಧಿ ಬಿಡುಗಡೆ ಮಾಡಲಾಗುವುದೆನ್ನಲಾಗಿದೆ. ಆಹಾರ ಭದ್ರಯನ್ವಯ ಹೊಂದಿರಬೇಕಾದ ದಾಸ್ತಾನಿಗಿಂತ ಬಹಳ ಹೆಚ್ಚುವರಿ ದಾಸ್ತಾನು ಸರಕಾರ ಹೊಂದಿದೆಯೆನ್ನಲಾಗಿದೆ.

## ದೇಶ ಅವಶ್ಯಕತೆ ಪೂರೈಸಲು ಸರಕಾರ ಸಾಕಷ್ಟು ಗೋಧಿ, ಅಕ್ಕಿ ದಾಸ್ತಾನು ಹೊಂದಿದೆ– ಸರಕಾರ

ದೇಶದ ಆಹಾರ ಭದ್ರಯನ್ವಯ ಪೂರೈಕೆಗಾಗಿ ಸರಕಾರ 227 ಲಕ್ಷ ಟನ್‌ಗಳ ಗೋಧಿ ಹಾಗೂ 205 ಲಕ್ಷ ಟನ್‌ಗಳ ಅಕ್ಕಿ ದಾಸ್ತಾನು ಹೊಂದಿದೆಯೆನ್ನಲಾಗಿದೆ. 2023 ಎಪ್ರಿಲ್‌ನಲ್ಲಿ ಆಹಾರ ಭದ್ರತೆ ಪೂರೈಸಿ 113 ಲಕ್ಷ ಟನ್ ಗೋಧಿ ಹಾಗೂ 237 ಲಕ್ಷ ಟನ್‌ಗಳ ಅಕ್ಕಿ ಹೆಚ್ಚುವರಿ ದಾಸ್ತಾನು ಸರಕಾರದ ಪೂಲ್‌ನಲ್ಲಿ ಇರಲಿದೆಯೆನ್ನಲಾಗಿದೆ.